ಇ) ಧೀಮಂತ ರಾಜಕಾರಣಿ ಗೋಪಾಲಗೌಡರ ಸ್ಮಾರಕವಾಗಿ ನಿರ್ಮಿಸುತ್ತಿರುವ ಈ ರಂಗಮಂದಿರಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಅಲ್ಪ ಹಣ ಸಮಂಜಸ ಎಂದು ಸರ್ಕಾರ ಭಾವಿಸುವುದೇ:

ಈ) ಈ ಸಾಲಿನಲ್ಲಾದರೂ ಹೆಚ್ಚಿನ ಹಣಬಿಡುಗಡೆ ಮಾಡಲಾಗುವುದೇ: ಹೌದಾದಲ್ಲಿ, ಎಂದು ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಉದ್ದೇಶಿತ ಕಾರ್ಯಕ್ಕೆ ಇಲಾಖೆಯಿಂದ ಈಗಾಗಲೇ 1.50 ಲಕ್ಷ ರೂ.ಗಳನ್ನು ನೀಡಲಾಗಿದ್ದು, ಉಳಿದ ಹಣವನ್ನು ಜಿಲ್ಲಾ ಆಡಳಿತವು ಸ್ಥಳೀಯ ಸಂಪನ್ಮೂಲದಿಂದ ಕ್ರೋಢೀಕರಿಸಿ ಕಾಮಗಾರಿ ಪೂರ್ಣಗೊಳಿಸಬೇಕಾಗುತ್ತದೆ. ಏಕೆಂದರೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಕೇವಲ 5.00 ಲಕ್ಷ ರೂ.ಗಳನ್ನು ಮಾತ್ರ ಅವಕಾಶ ಮಾಡಿಕೊಂಡಿದ್ದು ಇಲಾಖೆಯ ಇತಿಮಿತಿಯಲ್ಲಿ ಇತರ ಜಿಲ್ಲೆಗಳ ಬೇಡಿಕೆಗಳಿಗೂ ಹಣ ಮಂಜೂರಾತಿ ಮಾಡಬೇಕಾಗಿರುವುದರಿಂದ ರೂ.65.00 ಲಕ್ಷಗಳನ್ನು ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

ಆ) 1.50 ಲಕ್ಷ ರೂ.ಗಳು

ಇ) ಸರ್ಕಾರವು ತನ್ನ ಯೋಜನೆಯ ಇತಿಮಿತಿಯಲ್ಲಿ ಉದ್ದೇಶಿತ ಕಾರ್ಯಕ್ಕೆ 1.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ..

ಈ) ಪ್ರಶ್ನೆ 'ಅ' ದಲ್ಲಿ ಉತ್ತರಿಸಿದಂತೆ

431 (756) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಡಾಂಬರು ದರ ಹೆಚ್ಚಿದ ಹಿನ್ನೆಲೆಯಲ್ಲಿ ಟೆಂಡರ್ ಕರೆದ ಕಾಮಗಾರಿಗಳ ಕೆಲಸವನ್ನು ಅದರಲ್ಲೂ ವಿಶೇಷವಾಗಿ 3054 ಕಾಮಗಾರಿಗಳನ್ನು ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಡಾಂಬರು ದರ ಹೆಚ್ಚಳವನ್ನು ಸರಿದೂಗಿಸಲು ಸರ್ಕಾರ ಪೂರ್ವಾನ್ವಯವಾಗುವಂತೆ ಗುತ್ತಿಗೆದಾರರಿಗೆ ಹೆಚ್ಚುವರಿ ಹಣ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ. ಡಾಂಬರು ದರ ಹೆಚ್ಚಿದ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ವಹಿಸಿದ ಕಾಮಗಾರಿಗಳ ಪ್ರಗತಿ ಕುಂಠಿತಗೊಂಡಿದೆ.

ಆ. ಡಾಂಬರು ದರ ಹೆಚ್ಚಾದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರಸಂಖ್ಯೆ ಪಿಡಬ್ಲ್ಯೂಡಿ 58:ಆರ್‌ಡಿಎಫ್:2005 ದಿನಾಂಕ:17.2.2006 ರಂದು ಡಾಂಬರನ್ನು ಒಳಗೊಂಡ ಅಂಶಗಳಿಗೆ ಮಾತ್ರ

ಅನ್ವಯವಾಗುವಂತೆ ಪ್ರತಿಶತ 20 ರಷ್ಟು ಅಡ್‌ಹಾಕ್ ಹೆಚ್ಚಳದ ಆದೇಶ ಹೊರಡಿಸಿದ್ದು, ಅದರಂತೆ ಡಾಂಬರೀಕರಣ ಕಾಮಗಾರಿಗಳಿಗೆ ಹೆಚ್ಚುವರಿ ದರದ ಅವಕಾಶ ಕಲ್ಪಿಸಲಾಗಿದೆ. ತದನಂತರ ದಿನಾಂಕ:20.4.2006 ರಿಂದ 2006–07ನೇ ಸಾಲಿನ ಪರಿಷ್ಕೃತ ದರಪಟ್ಟಿ ಜಾರಿಗೆ ತರಲಾಗಿದೆ.

ಇ) ಪರಿಶೀಲನೆಯಲ್ಲಿರುತ್ತದೆ.

432 (757) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತೀರ್ಥಹಳ್ಳಿ ಮತ ಕ್ಷೇತ್ರ ವ್ಯಾಪ್ತಿಗೆ ಬರುವ ತೀರ್ಥಹಳ್ಳಿ ತಾಲ್ಲೂಕಿನ ಗುಡ್ಡಕೇರಿ–ಬೇಗಾರು ರಸ್ತೆ, ತೀರ್ಥಹಳ್ಳಿ ಅರಗ–ಹೊಸನಗರ ಗಡಿ ರಸ್ತೆ, ತೀರ್ಥಹಳ್ಳಿ–ಮಾಳೂರು–ಮಹಿಷಿ–ಬಾಳಗಾರು ರಸ್ತೆ, ಕಟ್ಟಿಹಕ್ಕಲು–ಮಲ್ಲಂದೂರು ರಸ್ತೆ ಹಾಗೂ ಹೊಸನಗರ ತಾಲ್ಲೂಕಿನ ಸಂಪಿಕಟ್ಟೆ ಕಟ್ಟಿನಹೊಳೆ–ಗೌರಿಕೆರೆ ರಸ್ತೆ ಮತ್ತು ಮಕ್ಕಿಮನೆ–ಕೊಪ್ಪ ರಸ್ತೆಗಳು ಹಾಲಿ ಗ್ರಾಮೀಣ ರಸ್ತೆಗಳಾಗಿದ್ದು, ಇವು ಬಹಳ ಪ್ರಮುಖ ರಸ್ತೆಗಳಾಗಿರುವುದರಿಂದ ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದೇ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ತೀರ್ಥಹಳ್ಳಿ ಮತ ಕ್ಷೇತ್ರ ವ್ಯಾಪ್ತಿಗೆ ಬರುವ ತೀರ್ಥಹಳ್ಳಿ ತಾಲ್ಲೂಕಿನ ಗುಡ್ಡಕೇರಿ–ಬೇಗಾರು ರಸ್ತೆಯು ಈಗಾಗಲೇ "ತೀರ್ಥಹಳ್ಳಿ ತಾಲ್ಲೂಕಿನ ಕುಂದಾದ್ರಿ ಚೈನ್ ದೇವಸ್ಥಾನದಿಂದ ಹೊಸಗದ್ದೆ ಗುಡ್ಡೇಕೇರಿಯನ್ನು ಸಂಪರ್ಕಿಸುವ ರಸ್ತೆ (ಉದ್ದ 15.00 ಕಿಮೀ) ಎಂಬ ನಾಮಾಂಕಿತದಲ್ಲಿ ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಯಾಗಿರುತ್ತದೆ.

ಉಳಿದ ಐದು ಪ್ರಸ್ತಾಪಿತ ರಸ್ತೆಗಳಾದ

1) ತೀರ್ಥಹಳ್ಳಿ ಅರಗ–ಹೊಸನಗರ ಗಡಿ ರಸ್ತೆ
2) ತೀರ್ಥಹಳ್ಳಿ ಮಾಳೂರು–ಮಹಿಷಿ–ಬಾಲಗಾರು ರಸ್ತೆ,
3) ಕಟ್ಟಿಹಕ್ಕಲು–ಮಲ್ಲಂದೂರು ರಸ್ತೆ ಹಾಗೂ ಹೊಸನಗರ ತಾಲ್ಲೂಕಿನಲ್ಲಿ
4) ಸಂಪೇಕಟ್ಟೆ ಕಟ್ಟಿನಹೊಳೆ ಗೌರಿಕೆರೆ ರಸ್ತೆ
5) ಮತ್ತಿಮನೆ ಅರಮನೆಕೊಪ್ಪ ಬಪ್ಪನಮನೆ (ಮಕ್ಕಿಮನೆ ಕೊಪ್ಪ ರಸ್ತೆ)

ಈ ರಸ್ತೆಗಳು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

433 (758) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ).: ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ 'ಜಿ' ಪ್ರವರ್ಗ ದಡಿಯಲ್ಲಿ ಎಷ್ಟು ಬಿ.ಡಿ.ಎ. ನಿವೇಶನಗಳನ್ನು ಮಂಜೂರು ಮಾಡಲಾಗಿದೆ (ಫಲಾನುಭವಿಗಳ ಹೆಸರು, ವಿಳಾಸ, ನಿವೇಶನದ ಅಳತೆ, ಬಡಾವಣೆ ಇತ್ಯಾದಿ ವಿವರ ನೀಡುವುದು)?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):